ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು):–

ಅ) 460

ಆ) ವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಈಗಾಗಲೇ ಕರ್ನಾಟಕ ಲೋಕಸೇವಾ ಆಯೋಗವನ್ನು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

**ಕೋಲಾರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾವು ಕಚ್ಚಿದ್ದಕ್ಕೆ ಔಷಧಿಗಳು ದೊರೆಯದಿರುವುದು**

484. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಕೋಲಾರದಲ್ಲಿ ಹಾವು ಕಚ್ಚಿದವರಿಗೆ ಒದಗಿಸಲಾದ ಔಷಧಿಯ ಪ್ರಮಾಣವೆಷ್ಟು?

ಆ) ಈ ಔಷಧಿಯನ್ನು ಕೋಲಾರ ಜಿಲ್ಲೆಯ ಎಷ್ಟು ಸರ್ಕಾರಿ ಆಸ್ಪತ್ರೆ ಹಾಗೂ ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾಯಿತು/ (ಔಷಧಿ ಹೆಸರು ಮತ್ತು ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿರುವ ಎಷ್ಟೆಷ್ಟು ಸರ್ಕಾರಿ ಆಸ್ಪತ್ರೆ ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಿರುವ ಬಗ್ಗೆ ವಿವರ ನೀಡುವುದು)

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯರು):–

ಅ) 40 ವಾಯಿಲ್‌ಗಳು

ಆ) ಕಳೆದ ವರ್ಷ ಕೋಲಾರದಲ್ಲಿರುವ ಎಸ್‌ಎನ್‌ಆರ್ ಆಸ್ಪತ್ರೆಗೆ 40 ವಾಯಿಲ್‌ಗಳು ಮತ್ತು ಕೆ.ಜಿ.ಎಫ್. ನಲ್ಲಿರುವ ಆಸ್ಪತ್ರೆಗೆ 45 ವಾಯಿಲ್‌ಗಳು ಸರಬರಾಜು ಮಾಡಲಾಗಿದೆ.

ಜಿಲ್ಲಾ ಪರಿಷತ್ತಿನವರು ಈ ಔಷಧಿಯನ್ನು ಸರಬರಾಜು ಮಾಡಿರುವುದಿಲ್ಲ. ಈ ಔಷಧಿಯ ಹೆಸರು ''ಆಂಟಿ ಸ್ನೇಕ್ ವೆನಮ್''

**ನೆಲಮಂಗಲ ಪಟ್ಟಣಕ್ಕೆ ಸಾರ್ವಜನಿಕ ಆಸ್ಪತ್ರೆ ಆಗತ್ಯದ ಬಗ್ಗೆ**

479. ಶ್ರೀ ಅಂಜನಮೂರ್ತಿ (ನೆಲಮಂಗಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಟೌನ್‌ನಲ್ಲಿ ಹಾದುಹೋಗುವ 4ನೇ ರಾಷ್ಟ್ರೀಯ ಹೆದ್ದಾರಿಯಲ್ಲಿ ದಿನನಿತ್ಯ ಅನೇಕ ಅಪಘಾತಗಳಾಗಿ ಅನೇಕ ಸಾವು–ನೋವುಗಳು ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ಟೌನ್‌ನಲ್ಲಿ ಸರಿಯಾದ ಚಿಕಿತ್ಸಾ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಟೌನಿನಲ್ಲಿ ಒಂದು ಜನರಲ್ ಆಸ್ಪತ್ರೆ ಆಗಬೇಕೆಂಬ ಮನವಿ ಬಂದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವೆಯವರು):–

ಅ) ಬಂದಿದೆ

ಆ) ಬಂದಿದೆ

ಇ) ಹೌದು

ಈ) ಪರಿಶೀಲನೆಯಲ್ಲಿದೆ.